ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್ ಎಂ.ಕೆ ರವರು
ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ

**ವಿಷಯ:-** **ರಾಜ್ಯದಲ್ಲಿ CAA ಮತ್ತು NRC ಜಾರಿ ವಿರುದ್ಧ ನಡೆದ ಹೋರಾಟಗಳ ಕುರಿತು ಹಾಗೂ ಹೋರಾಟಗಳಲ್ಲಿ ಭಾಗವಹಿಸಿ ದೇಶದ್ರೋಹದ ಆರೋಪದ ಮೇಲೆ ಮೊಕದ್ದಮೆಗಳನ್ನು ದಾಖಲಿಸಿರುವ ಮತ್ತು ದೇಶದ್ರೋಹ ಆರೋಪ ಹೊತ್ತಿರುವ ಸಂಘಟನೆಗಳ ವಿರುದ್ಧ ಈವರೆಗೂ ಸರ್ಕಾರ ಕೈಗೊಂಡ ಕ್ರಮಗಳ ಕುರಿತು.**

ಉತ್ತರ:- ರಾಜ್ಯದಲ್ಲಿ CAA ಮತ್ತು NRC ಜಾರಿ ವಿರುದ್ಧ ನಡೆದ ಹೋರಾಟಗಳಲ್ಲಿ ಭಾಗವಹಿಸಿದವರ ವಿರುದ್ಧ ಒಟ್ಟು 14 ದೇಶದ್ರೋಹದ ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿದೆ:-

| ಕ್ರಸ | ನಗರ/ ಜಿಲ್ಲೆ | ದಾಖಲಾದ ಪ್ರಕರಣಗಳ ಸಂಖ್ಯೆ | ಪ್ರಸ್ತುತ ಹಂತ |
|---|---|---|---|
| 1 | ಬೆಂಗಳೂರು ನಗರ | 01 | ತನಿಖೆಯಲ್ಲಿರುತ್ತದೆ |
| 2 | ಮಂಗಳೂರು ನಗರ | 13 | ತನಿಖೆಯಲ್ಲಿರುತ್ತವೆ |
| | **ಒಟ್ಟು** | **14** | |

ಇವುಗಳಲ್ಲದೆ, ಬೀದರ್ ಜಿಲ್ಲೆಯ ಶಾಹೀನ್ ಶಿಕ್ಷಣ ಸಂಸ್ಥೆ ಹಾಗೂ ಹುಬ್ಬಳ್ಳಿಯ ಕೆ.ಎಲ್.ಇ. ಶಿಕ್ಷಣ ಸಂಸ್ಥೆಯಲ್ಲಿ ನಡೆದ ಘಟನೆಗಳಲ್ಲಿ ಭಾಗವಹಿಸಿದವರು ದೇಶದ ಮೇಲೆ ದ್ವೇಷ ಭಾವನೆ ಬರುವಂತಹ ಹಾಗೂ ಎರಡು ಕೋಮುಗಳ ಮಧ್ಯೆ ಭಯಭೀತಿ ಉಂಟು ಮಾಡಿ ಧಾರ್ಮಿಕ ಭಾವನೆಗೆ ಧಕ್ಕೆಯಾಗುವಂತೆ ವರ್ತಿಸಿದ್ದು, ಇವರುಗಳ ವಿರುದ್ಧ ದೂರುಗಳನ್ನು ನೀಡಿದ್ದು, ದೂರಿನ ಘಟಕಾಂಶಗಳ ಆಧಾರದ ಮೇಲೆ ಅಪರಾಧ ಸಂಖ್ಯೆ: 10/2020 ಕಲಂ. 504, 505(2), 124(ಎ), 153(ಎ)(ಬಿ), 154(ಬಿ) ಜೊತೆ 34 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಸ್ತುತ ಪ್ರಕರಣವು ತನಿಖೆಯಲ್ಲಿದೆ.

---

**ಹೆಚ್‌ಡಿ 46 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು